ಶ್ರೀ ರಾಮಚಂದ್ರ ಮಿಷನ್®

ECHOES
ಇಂಡಿಯಾ
ವಾರ್ತಾಪತ್ರ

# ಪೂಜ್ಯ ಬಾಬೂಜಿಯವರ 116ನೇ ಜನ್ಮದಿನದ ಆಚರಣೆ




ಲಖನೌ, ಉ.ಪ್ರ
ಏಪ್ರಿಲ್ 29 ರಿಂದ ಮೇ 1, 2015

## ಪ್ರಾರಂಭಿಕ ಪ್ರಕಟಣೆ

2015, ಜನವರಿ 12 ರಂದು, ಪೂಜ್ಯ ಕಮಲೇಶ್ ಭಾಯಿಯವರು, ಸಹಜ ಸಂದೇಶದ ಮುಖಾಂತರ, ವಿಶ್ವವ್ಯಾಪಿ ಅಭ್ಯಾಸಿಗಳಿಗೆ ಪೂಜ್ಯ ಬಾಬೂಜಿ ಮಹಾರಾಜರ ಜನ್ಮದಿನವನ್ನು ಉತ್ತರಪ್ರದೇಶದ ಲಖನೌದಲ್ಲಿ2015ರ ಏಪ್ರಿಲ್ 29ರಿಂದ ಮೇ 1ರವರೆಗೆ ಆಚರಿಸಲಾಗುವುದೆಂದು ಘೋಷಿಸಿ, ಎಲ್ಲರೂ ಅತಿ ಹೆಚ್ಚಿನ ಸಂಖ್ಯೆಯಲ್ಲಿಅಲ್ಲಿ ಸೇರಬೇಕೆಂದು ಒತ್ತಾಯಪೂರ್ವಕವಾಗಿ ವಿನಂತಿಸಿದರು.

## ಸಿದ್ಧತೆ

ಸಮಾರಂಭದ ಆತಿಥೇಯರು ಲಖನೌಎಂದು ಪ್ರಕಟವಾದ ಕೂಡಲೆ, ಸಮಾರಂಭದ ಸಿದ್ಧತೆಯ ಕೆಲಸವು ಪ್ರಾರಂಭವಾಯಿತು. ಹಿಂದೆ, 2010ರಲ್ಲಿ ನಡೆದ ಪ್ರಿಯ ಚಾರೀಜಿಯವರ ಹುಟ್ಟು ಹಬ್ಬ ಸಮಾರಂಭದ ಐದು ವರ್ಷಗಳ ದೀರ್ಘ ಕಾಲದ ನಂತರ ಇನ್ನೊಂದು ಸಮಾರಂಭದ ಆತಿಥ್ಯ ವಹಿಸುವ ಕಾತುರದ ನಿರೀಕ್ಷಣೆ ಇತ್ತು.

ಸಮಾರಂಭದ ಸಮಿತಿಯು, ವ್ಯವಸ್ಥೆಯ ಕುರಿತು ಸುತ್ತೋಲೆ ಹೊರಡಿಸುವುದರಿಂದಪ್ರಾರಂಭಿಸಿ, ನೋಂದಣಿಗೆ ಚಾಲನೆ ನೀಡಿತು ಮತ್ತು ಎಲ್ಲರಿಗೂ ಅವಶ್ಯಕ ವ್ಯವಸ್ಥೆಗಳನ್ನು ಒದಗಿಸಲು ಹಾಗು ಅವರುಗಳು ಅಂತಹ ಒಂದು ಆಚರಣೆಯ ವಿಶೇಷ ವಾತಾವರಣದಲ್ಲಿ ತಲ್ಲೀನರಾಗುವಂತೆ ಮಾಡುವಂತೆಸಮಾರಂಭವನ್ನು ನಡೆಸಲು ಅವಶ್ಯಕವಾಗಿರುವ ಎಲ್ಲಾ ಅಂಶಗಳನ್ನು ಗಮನಿಸಲು, ಸ್ವಯಂಸೇವಕರ ತಂಡಗಳನ್ನು ಮಾಡಿತು.

ಚಿಕ್ಕದಾದರೂ ಬಹಳ ಸಮರ್ಪಣಾಭಾವದ ಸ್ವಯಂಸೇವಕರ ಗುಂಪೊಂದು, ಆಚರಣೆಯ ಸ್ಥಳದಲ್ಲಿ ಅವಿರತವಾಗಿ ಕೆಲಸಮಾಡುತ್ತಿದ್ದರು. ಕಮಲೇಶ್ ಭಾಯಿಯವರು ಸಿದ್ಧತೆಯ ಮೇಲ್ವಿಚಾರಣೆಗೆ, ಏಪ್ರಿಲ್ 15ರಂದು ಲಖನೌಆಶ್ರಮಕ್ಕೆ ಭೇಟಿ ನೀಡಿ, ಸಮಾರಂಭಸ್ಥಳದಲ್ಲಿ ಸುತ್ತುಹಾಕಿ ಅಡುಗೆ ಮನೆ, ಸಾಮಾನ್ಯ ವಸತಿ, ಸುಖನಿವಾಸ, ಕ್ಯಾಂಟೀನ್, ಪುಸ್ತಕಾಲಯ, ವೈದ್ಯಕೀಯ ಕೇಂದ್ರ, ಮಕ್ಕಳ ಕೇಂದ್ರ ಮತ್ತು ನಿರ್ಮಾಣ ಹಂತದಲ್ಲಿದ್ದ ಇನ್ನಿತರ ಹಲವು ವಿಭಾಗಗಳಿಗೆ ಭೇಟಿಯಿತ್ತರು. ಸಿದ್ಧತೆಯ ಪ್ರಗತಿಯನ್ನು ಕಂಡು ಸಂತುಷ್ಟರಾಗಿ, ಇನ್ನಷ್ಟು ಸುಧಾರಣೆಗೆ ಸಲಹೆಗಳನ್ನು ಕೊಟ್ಟರು.

## ಭಂಡಾರಕ್ಕೆ ಗುರುಗಳ ಆಗಮನ

ಕಮಲೇಶ್ ಭಾಯಿಯವರು, ಸಮಾರಂಭಕ್ಕೆ, ಏಪ್ರಿಲ್ 27ರಂದು, ಹೈದರಾಬಾದ್‌ನಿಂದ ಲಖನೌಗೆ ಆಗಮಿಸಿದರು.ಪೂರ್ವನಿರೀಕ್ಷಣೆಗಳೊಡನೆ ಮತ್ತು ಅತ್ಯಂತ ಕಾತುರದಿಂದ ಕಾಯುತ್ತಿರುವ ಸಮಾರಂಭಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ಬರಮಾಡಿಕೊಳ್ಳಲಾಯಿತು. ಅವರು 27ರಂದು ಸಾಯಂಕಾಲದ ಸತ್ಸಂಗವನ್ನು ಹಾಗು 28ರಂದು ಎರಡು ಸತ್ಸಂಗಗಳನ್ನು ನಡೆಸಿಕೊಟ್ಟರು. 28ರ ಬೆಳಗಿನ ಸಮಯದಲ್ಲಿ ಅವರು, ಮೂರು ಘಂಟೆಗಳಿಗಿಂತ ಹೆಚ್ಚಾಗಿ ಕ್ಯಾಂಟೀನ್ ಟೋಕನ್‌ಗಳನ್ನು ವಿತರಿಸುತ್ತಿದ್ದುದನ್ನು ನೋಡಿ, ಅಭ್ಯಾಸಿಗಳು ಆಶ್ಚರ್ಯಚಕಿತರಾಗಿ ಸಂತೋಷಪಟ್ಟರು



ಮತ್ತುಎಲ್ಲರೂ ಅವರಿಂದ ಟೋಕನ್‌ಗಳನ್ನು ಪಡೆಯಲು ಸರತಿಯ ಸಾಲಲ್ಲಿ ನಿಂತರು.

## ಸಮಾರಂಭ ಸ್ಥಳ

ಅತ್ಯಧಿಕ ಸಂಖ್ಯೆಯ ಜನರ ಸಮಾವೇಶವಾದ್ದರಿಂದ, ವಿಶಾಲವಾದ ಆವರಣದಲ್ಲಿ ವ್ಯವಸ್ಥೆಯನ್ನು ಮಾಡಲಾಗಿತ್ತು. ಒಂದು ಕೊನೆಯಲ್ಲಿ ನೋಂದಣಿ, ಹಾಸಿಗೆಯ ವಸ್ತ್ರಗಳು, ಹಾಗು ವಸತಿಯ ಗುಡಾರಗಳು, ಮುಖ್ಯ ಅಡುಗೆಮನೆ ಮತ್ತು ಅಭ್ಯಾಸಿಗಳ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು. ಧ್ಯಾನಮಂದಿರದ ಕಡೆ ಹೋಗುವ ಮಾರ್ಗದಲ್ಲಿ ಕುಡಿಯುವ ನೀರು, ಪುಸ್ತಕಗಳ ಮಳಿಗೆ, ದೇಣಿಗೆ, ಬ್ಯಾಂಕ್ ಮತ್ತು ವಿವಿಧ ತಿಂಡಿ ತಿನಿಸುಗಳನ್ನುಳ್ಳ ವಿಶಾಲವಾದ ಕ್ಯಾಂಟೀನಿನ ವ್ಯವಸ್ಥೆ ಮಾಡಲಾಗಿತ್ತು. ಅಭ್ಯಾಸಿಗಳು ತಮ್ಮ ಮಕ್ಕಳನ್ನು ಸುಲಭವಾಗಿ ಬಿಟ್ಟು ಹೋಗಲು ಅನುಕೂಲವಾಗುವ ಹಾಗೆ ಮಕ್ಕಳ ಕೇಂದ್ರವನ್ನು ಧ್ಯಾನಮಂದಿರಕ್ಕೆ ಹೋಗುವ ದಾರಿಯಲ್ಲಿ ಕ್ಯಾಂಟೀನಿನ ನಂತರ ಕಟ್ಟಲಾಗಿತ್ತು. ಅಭ್ಯಾಸಿಗಳಿಗಾಗಿ, ಗುಡಾರಗಳಿದ್ದ ಸ್ಥಳದಿಂದ, ಧ್ಯಾನಮಂದಿರದ ಆವರಣದ ಬಾಗಿಲವರೆಗೆ ವಾಹನ ವ್ಯವಸ್ಥೆಯನ್ನು ಸಹ ಮಾಡಲಾಗಿತ್ತು. 'ಸುಖನಿವಾಸ'ವೆಂದು ಕರೆಯಲಾಗುವ ಆರಾಮಕರ ವಸತಿಗೃಹವನ್ನು ಮತ್ತು ಅದರೊಡನೆ ಒಂದು ಸಣ್ಣ ಕ್ಯಾಂಟೀನನ್ನು ಧ್ಯಾನಮಂದಿರದ ಒಂದು ಪಕ್ಕದಲ್ಲಿ ವ್ಯವಸ್ಥೆಮಾಡಲಾಗಿತ್ತು ಮತ್ತು ಗುರುಗಳ ಕುಟೀರವು ಇನ್ನೊಂದು ಬದಿಯಲ್ಲಿತ್ತು.

ಪುಸ್ತಕದ ಮಳಿಗೆಯು ವಿಶಾಲವಾಗಿತ್ತು ಮತ್ತು ಛಾಯಾಚಿತ್ರಗಳಿಗಾಗಿಯೇ ಒಂದು ದೊಡ್ಡ ವಿಭಾಗ ಮಾಡಿ, ಮಾರಾಟಕ್ಕಾಗಿ ಅವುಗಳನ್ನು ಪ್ರದರ್ಶಿಸಲಾಗಿತ್ತು. ಈ ಸಲ ಮೊದಲ ಬಾರಿಗೆ ಮಾಡಿದ ಹೊಸ ರೀತಿಯ ವ್ಯವಸ್ಥೆಯು, ಒಂದೇ ಸೂರಿನಡಿ ಹಲವಾರು ಅಂಗಡಿಗಳುಳ್ಳ ಮಳಿಗೆ (ಮಾಲ್) ಒಂದರಲ್ಲಿ ಖರೀದಿಸುವ ಅನುಭವವನ್ನು ನೀಡುವಂತಹದಾಗಿತ್ತು. ಎಲ್ಲರು ನಡೆದಾಡುತ್ತಲೆ ಅಂಗಡಿಗಳ ಒಳಗೆ ನೋಡಬಹುದಾಗಿತ್ತು ಮತ್ತು ತಮಗೆ ಆಸಕ್ತಿಯುಳ್ಳ ಪುಸ್ತಕ, ಡಿವಿಡಿ, ಸಿಡಿಗಳನ್ನು ಆಯ್ದುಕೊಳ್ಳುತ್ತಾ, ಅಂಗಡಿಯಿಂದ ಅಂಗಡಿಗೆ ಚಲಿಸಬಹುದಾಗಿತ್ತು. ಮೊದಲ ಬಾರಿಗೆ ಕೇಂದ್ರೀಕೃತ ಪಾವತಿ ಕೌಂಟರ್‌ಗಳನ್ನು ಮಾಡಿದ್ದರಿಂದ, ಅಲ್ಲಿದ್ದ ಹತ್ತು ಕೌಂಟರ್‌ಗಳಲ್ಲಿ ಯಾವುದಕ್ಕಾದರೂ ಹೋಗಿ, ವಿಕ್ರಯಪಟ್ಟಿ (ಬಿಲ್) ಮಾಡಿಸಿ, ನಗದು ಅಥವಾ ಕ್ರೆಡಿಟ್ ಕಾರ್ಡ ಮೂಲಕ ಪಾವತಿ ಮಾಡಬಹುದಾಗಿತ್ತು, ಸಂಪರ್ಕದ ಅಡಚಣೆಗಳಿಂದ ಕ್ರೆಡಿಟ್ ಕಾರ್ಡಪಾವತಿಯಲ್ಲಿ ಸ್ವಲ್ಪ ತೊಂದರೆಯಾದರೂ ಸಹ, ಹೊಸ ವಿಧಾನವುಖಂಡಿತವಾಗಿಯೂ ಎಲ್ಲರ ಕೊಳ್ಳುವ ಅನುಭವವನ್ನು ಅಧಿಕಗೊಳಿಸಿತು.

## ಧ್ಯಾನಮಂದಿರ

ಏನೆಂದರೂ, ಅತ್ಯಂತ ಪ್ರಭಾವಶಾಲಿ ಸ್ಥಳವೆಂದರೆ 1,54,000 ಅಡಿಗಳನ್ನಾವರಿಸಿದ ಭವ್ಯವಾದ ಧ್ಯಾನಮಂದಿರ. ಅದನ್ನು ವಿಶೇಷವಾದ ಜರ್ಮನಿಯ ತಂತ್ರಜ್ಞಾನದಿಂದ ನಿರ್ಮಿಸಲಾಗಿತ್ತು ಮತ್ತು ಅದರಲ್ಲಿ 130 ಅಡಿಗಳವಿಸ್ತಾರದವರೆಗೂ ಅಡ್ಡವಾಗಿ ಆಧಾರಸ್ತಂಭಗಳ ಅವಶ್ಯಕತೆ ಇಲ್ಲದೇ ಇದ್ದುದರಿಂದ, ಎಲ್ಲಾ ಅಭ್ಯಾಸಿಗಳೂ ಸಂಪೂರ್ಣ ವೇದಿಕೆಯನ್ನು ಅಡೆತಡೆಯಿಲ್ಲದೆ ವೀಕ್ಷಿಸಬಹುದಾಗಿತ್ತು. ಅಭ್ಯಾಸಿಗಳು ಸುಲಲಿತವಾಗಿ ಕಾರ್ಯಕ್ರಮವನ್ನು ವೀಕ್ಷಿಸುವುದಕ್ಕಾಗಿ, ಒಂದು ವೇದಿಕೆ ಮತ್ತು ಹಲವಾರು ಎಲ್ ಇ ಡಿ ಪರದೆಗಳನ್ನು ಹಾಕಲಾಗಿತ್ತು. ನೆಲದ ಮೇಲೆ ಕುಳಿತುಕೊಳ್ಳುವವರಿಗಾಗಿ, ತಮ್ಮದೇ ಸ್ವಂತ ಕುರ್ಚಿಗಳನ್ನು ತಂದುಕೊಂಡವರಿಗಾಗಿ ಹಾಗು ಅವಶ್ಯಕತೆಯುಳ್ಳವರಿಗಾಗಿ ಕುರ್ಚಿಗಳ ವಿಶಾಲವಾದ ಪ್ರದೇಶ ಹೀಗೆ ಬೇರೆ ಬೇರೆ ವ್ಯವಸ್ಥೆಗಳನ್ನು ಮಾಡಲಾಗಿತ್ತು. ಈ ಸಮಯದಲ್ಲಿ ಲಖನೌದಲ್ಲಿನ ಬಿಸಿಲನ್ನು ಗಮನದಲ್ಲಿರಿಸಿಕೊಂಡು, ಮೇಲು ಛಾವಣಿಯನ್ನು ವಿಶೇಷವಾದ ಪಿ ವಿ ಸಿ ಹೊದಿಕೆಗಳಿಂದ ಮುಚ್ಚಿದುದರಿಂದ, ಅದು ಧ್ಯಾನಮಂದಿರದ ಒಳಗಿನ ತಾಪಮಾನವನ್ನು ಕಡಿಮೆಯಾಗಿಸಿದ್ದೇ ಅಲ್ಲದೆ, ಜಲನಿರೋಧಕವೂ ಆಗಿತ್ತು. ಧ್ಯಾನಮಂದಿರದಲ್ಲಿ ಬಹಳಷ್ಟು ಛಾವಣಿಯ ಪಂಖಗಳನ್ನು ಮತು ಬದಿಗಳಲ್ಲಿ ತುಂತುರು ಹನಿಸುವ ಪಂಖಗಳನ್ನುಹಾಕಿ, ಧ್ಯಾನಕ್ಕಾಗಿ ಹಿತಕರವಾದ ವಾತಾವರಣವನ್ನು ಕಲ್ಪಿಸಲಾಗಿತ್ತು.

## ಸ್ವಯಂಸೇವಕರು

ಯಾವುದೇ ಸಮಾರಂಭವು ಒಂದು ಸಮರ್ಪಿತ ಸ್ವಯಂಸೇವಕರ ತಂಡವಿಲ್ಲದೆ ನಡೆಯಲು ಸಾಧ್ಯವಿಲ್ಲ. ಎಲ್ಲಾ ವಯಸ್ಸಿನ ಸ್ವಯಂಸೇವಕರು ಸಾರಿಗೆ,







ಉಸ್ತುವಾರಿ, ಧ್ಯಾನಮಂದಿರ, ಸುರಕ್ಷೆ, ವೈದ್ಯಕೀಯ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿದ್ದರು.ಈ ಭಂಡಾರದಲ್ಲಿನ ವಿಶೇಷ ಮಾರ್ಪಾಟೆಂದರೆ ವಿಷಯಾನುಸಾರ ತೋಳ್ಪಟ್ಟಿಗಳನ್ನು ಸ್ವಯಂಸೇವಕರು ಧರಿಸಿದ್ದುದು. ರಕ್ಷಣಾ ಸ್ವಯಂಸೇವಕ ತಂಡ "ನಮ್ರತೆ", ಉಸ್ತುವಾರಿ ತಂಡ"ಸೇವೆ", ವೈದ್ಯಕೀಯ ತಂಡ "ಪ್ರೇಮ", ಧ್ಯಾನಮಂದಿರದ ತಂಡ "ಮೌನ" ಎಂಬ ತೋಳ್ಪಟ್ಟಿಗಳನ್ನು ಧರಿಸಿದ್ದರು.

## ನೋಂದಣಿ

2800 ಮಕ್ಕಳೂ ಸೇರಿದಂತೆ ಸುಮಾರು 20000 ಸಾವಿರ ಜನ ಭಂಡಾರದಲ್ಲಿ ಹಾಜರಿದ್ದರು.

## ಉತ್ಸವ

ಏಪ್ರಿಲ್ 29 ರಂದು ಮುಂಜಾನೆಯ ಸತ್ಸಂಗ ಆರಂಭಗೊಂಡಿತು. ಒಂದೆಡೆ ಪೂಜ್ಯ ಬಾಬೂಜಿಯವರು ಮತ್ತೊಂದೆಡೆ "ಪವಿತ್ರಪ್ರೇಮದಿಂದೊಡಗೂಡಿದ ಐಕ್ಯತೆ" ಎಂಬಪದಗುಚ್ಛವಿದ್ದಸರಳಸುಂದರಹಿನ್ನೆಲೆಯೊಂದಿಗೆವೇದಿಕೆ ಅಲಂಕರಣಗೊಂಡಿತ್ತು.

ಸತ್ಸಂಗದ ಬಳಿಕ ವಿವಿಧ ನೂತನ ಪ್ರಕಟಣೆಗಳ, ಡಿವಿಡಿಗಳ ಮತ್ತು ಶ್ರವ್ಯಪುಸ್ತಕಗಳ ಬಿಡುಗಡೆಗಾಗಿ ಕೆಲವು ಮಕ್ಕಳನ್ನು ವೇದಿಕೆಗೆ ಕರೆಯಲಾಯಿತು.

## ಗುರುಗಳ ಮೊದಲ ಭಾಷಣ

ಕಮಲೇಶ್ ಭಾಯಿಯವರು ಪ್ರಾರ್ಥನೆ, ಶುದ್ಧೀಕರಣ ಮತ್ತು ಸ್ಥಿತಿಯನ್ನು ಕಾಪಾಡಿಕೊಳ್ಳುವುದರ ಪ್ರಾಮುಖ್ಯತೆ, ಈ ಮೂರು ವಿಷಯಗಳ ಬಗ್ಗೆ ಮಾತನಾಡಿದಾಗ ಅಭ್ಯಾಸಿಗಳು ಪುಳಕಿತರಾದರು.

- ಸಹಜಮಾರ್ಗದಲ್ಲಿ "ನಾವು ಇನ್ನೂ ಕೇವಲ ಬಯಕೆಗಳ ದಾಸರು"ಮತ್ತು"ನೀನೇ ನಮ್ಮನ್ನು ಆ ಹಂತಕ್ಕೆ ಕರೆದೊಯ್ಯುವ ಏಕಮಾತ್ರ ದೈವ ಮತ್ತು ಶಕ್ತಿ" ಎಂದು ಹೇಳುತ್ತೇವೆ. ಅಂದರೆ, ಪ್ರಾರ್ಥನೆಯಲ್ಲಿ 'ನಾನು' ಎಂಬ ಏಕವಚನಬಳಸದೆ ' ನಾವು' ಎಂದುಬಹುವಚನಬಳಸುತ್ತೇವೆ, ಆದರೆ, ಪ್ರಾರ್ಥನೆಯಲ್ಲಿ ನಾವು ನಮಗಾಗಿ ಮಿತಿಗೊಳಿಸಲು ಬಯಸುತ್ತೇವೆ. ಪ್ರಾರ್ಥನೆ ನನಗೊಬ್ಬನಿಗೆ ಮಾತ್ರವಲ್ಲ, ಅದು ನಮ್ಮೆಲ್ಲರಿಗಾಗಿ.
- ಶುದ್ಧೀಕರಣದ ಬಗ್ಗೆ– ಸಂಕೀರ್ಣತೆಗಳು ನಮ್ಮಿಂದ ಹೊರಹೋಗುತ್ತಿವೆ ಎಂದು ಭಾವಿಸಿ ಕುಳಿತರೆ, ಉಳಿಯುವುದು ಸರಳತೆ ಮತ್ತು ಅಶುದ್ಧತೆಗಳು ನಮ್ಮಿಂದ ಹೊರಹೋಗುತ್ತಿವೆಯೆಂದು ಭಾವಿಸಿ ಕುಳಿತರೆ ಉಳಿಯುವುದು ಶುದ್ಧತೆ.
- ಸ್ಥಿತಿಯ ಬಗ್ಗೆ– ತಾಯಿ ಯಾವ ರೀತಿ ಮಗುವನ್ನು ತನ್ನ ಗರ್ಭದಲ್ಲಿ ಒಂಭತ್ತು ತಿಂಗಳು ಹೊತ್ತು ಲೌಕಿಕ ಜಗತ್ತಿಗೆ ನೀಡುತ್ತಾಳೊ, ಅದೇ ರೀತಿ ಗುರುಗಳು ಕೂಡ ಅಭ್ಯಾಸಿಯನ್ನು ತಮ್ಮ ಮನಸ್ಸಿನಲ್ಲಿ ನಮ್ಮ ಆಧ್ಯಾತ್ಮಿಕ ಅಸ್ತಿತ್ವವನ್ನು ದಿವ್ಯಲೋಕಕ್ಕೆ ನೀಡುವ ಮುನ್ನ ಏಳು ತಿಂಗಳು ಇರಿಸಿಕೊಳ್ಳುವರು, ಅದರೊಂದಿಗೆ ನಾವು ಚರಮದಲ್ಲಿ ವಿಲೀನವಾಗುವೆವು. ಅಂತರಂಗದಲ್ಲಿ ಗುರುಗಳೊಂದಿಗೆ ಶಾಶ್ವತ ಸಂಪರ್ಕವನ್ನು ಹೊಂದಲು ಅಭ್ಯಾಸಿಗಳನ್ನು ಕೋರಿದರು ಹಾಗು ಇದಕ್ಕೆ ಶಿಸ್ತು ಅವಶ್ಯವೆಂದರು.



ಶ್ರೀ ರಾಮಚಂದ್ರ ಮಿಷನ್® ಎಖೋಸ್ ಇಂಡಿಯಾ ವಾರ್ತಾಪತ್ರ



11 ಗಂಟೆಯ ಸತ್ಸಂಗದ ನಂತರ, ವಿಶೇಷ ಮುದ್ರಣದ ರಾಮಚಂದ್ರರ ಸಮಗ್ರ ಕೃತಿಗಳು–ಸಂಪುಟ–5 ರ ಬಿಡುಗಡೆಯನ್ನು ಘೋಷಿಸಲಾಯಿತು. ಈ ಮುದ್ರಣದಲ್ಲಿ ಬಾಬೂಜಿ ಮಹಾರಾಜರು 1940 ರಿಂದ 1970 ರ ಅವಧಿಯಲ್ಲಿ ಬರೆದ ಲೇಖನಗಳು, ಪತ್ರಗಳ ಆಯ್ದ ಭಾಗಗಳು ಮತ್ತು ಅನೌಪಚಾರಿಕ ಸಂಭಾಷಣೆಗಳಿಂದಾಯ್ದ ಉಕ್ತಿಗಳನ್ನು ಒಳಗೊಂಡಿದೆ.

ಸಂಜೆ 5.30ರ ಸತ್ಸಂಗದ ಬಳಿಕ ಗುರುಗಳು ಮತ್ತೊಮ್ಮೆ 'ಪ್ರೇಮ'ದಬಗ್ಗೆ, ಅಭ್ಯಾಸಿಗಳುಸಾಧನೆಯನ್ನುನಿಲ್ಲಿಸುವುದರಬಗ್ಗೆ, ಮತ್ತುಬದಲಾವಣೆಯನ್ನು ಆಹ್ವಾನಿಸಿಸ್ವಾಗತಿಸುವುದರಬಗ್ಗೆಮಾತನಾಡಿದರು.

- ಪ್ರೇಮ ಎಷ್ಟು ಪವಿತ್ರವಾಗಿದೆಯಂದರೆ ಅದರ ಬಗ್ಗೆ ಮಾತನಾಡುವುದನ್ನು ನಿಷೇಧಿಸಲಾಗಿದೆ. ಪ್ರೇಮದಲ್ಲಿ, ಕೇವಲ ಪ್ರೇಮಿ, ಪ್ರೇಮ ಮತ್ತು ಪ್ರಿಯತಮರು ಇರುತ್ತಾರೆ ಎಂದರು.
- ಅಭ್ಯಾಸಿಗಳಾದ ನಾವು, ಸಂಸ್ಕಾರಗಳ ಜೊತೆಗೆ ಬದಲಾವಣೆಗೆ ಹಾಗು ಪ್ರಗತಿಗೆ ತೊಡಕಾಗಿರುವ ಅಹಂಕಾರವೆಂಬ ದೊಡ್ಡ ಹೊರೆಯನ್ನು ಕೂಡ ಹೊತ್ತುಕೊಂಡಿದ್ದೇವೆ ಎಂದರು.
- ಬದಲಾವಣೆಯ ಕುರಿತು ಮಾತನಾಡುತ್ತ – ಪ್ರಗತಿ ಹೊಂದಲು, ನಾವು ಬದಲಾಗಬೇಕು ಮತ್ತು ಈ ಬದಲಾವಣೆಯನ್ನು ಆಹ್ವಾನಿಸಬೇಕು. ನಾವು ಬದಲಾವಣೆಗೆ ಎಷ್ಟು ವಿರೋಧಿಗಳೆಂದರೆ, ಗುರುಗಳು ನಮ್ಮನ್ನು ಮುನ್ನಡೆಸಲು ಬಯಸಿದಾಗಲೂ ನಾವು ಇರುವಲ್ಲಿಯೇ ಇದ್ದುಬಿಡುವುದಕ್ಕೆ ಇಚ್ಛಿಸುತ್ತೇವೆ. ನಾವುಗಳು ಸ್ವೀಕರಿಸಲು ಸಿದ್ಧವಿರುವ ಹಂತದವರೆಗೆ ಮಾತ್ರ ಗುರುಗಳು ನಮ್ಮಲ್ಲಿ ಬದಲಾವಣೆ ತರುತ್ತಾರೆ. ಈ ಬದಲಾಗುವಿಕೆಯ ಸ್ವೀಕಾರದ ಪಥ ಸಾಮಾನ್ಯರಿಗಲ್ಲ, ಅಸಾಮಾನ್ಯರಿಗೆ, ಏಕೆಂದರೆ ಬದಲಾವಣೆಯನ್ನು ಬಯಸುವುದು ಅಷ್ಟು ಸುಲಭವಲ್ಲ ಎಂದರು.

## 30 ಏಪ್ರಿಲ್ 2015

ಒಂದೆಡೆ ಪೂಜ್ಯ ಬಾಬೂಜಿಯವರು ಮತ್ತೊಂದೆಡೆ "ಪವಿತ್ರ ಪ್ರೇಮದಿಂದೊಡಗೂಡಿದ ಐಕ್ಯತೆ" ಎಂಬ ಪದಗುಚ್ಛವಿದ್ದ ಸರಳ ಸುಂದರ ಹಿನ್ನೆಲೆಯೊಂದಿಗೆ ವೇದಿಕೆ ಅಲಂಕರಣಗೊಂಡಿತ್ತು.

6.30 ರ ಮುಂಜಾನೆಯ ಸತ್ಸಂಗದ ಬಳಿಕ ಸೋದರ ಗುರುಪ್ರೀತ್‌ರವರು ಎರಡು ಭಕ್ತಿಗೀತೆಗಳನ್ನು ಹಾಡಿದಾಗ ಎಲ್ಲ ಅಭ್ಯಾಸಿಗಳು ಅದರಲ್ಲಿಯೆ ಮುಳುಗಿಹೋಗಿದ್ದರು. ಧ್ಯಾನ ಮಂದಿರದಲ್ಲಿ ಬಾಬೂಜಿಯವರ ಜೀವನದ ಮೊದಲ ಮತ್ತು ಎರಡನೆಯ ಭಾಗದ ವಿಡಿಯೊ ತೋರಿಸಲಾಯಿತು. 11.30 ರ ಸತ್ಸಂಗದ ನಂತರ ಸೋದರ ಪಿ.ಆರ್.ಕೃಷ್ಣರವರನ್ನು ತಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಮತ್ತು ಲಾಲಾಜಿ, ಬಾಬೂಜಿ, ಮಾತೆ ಜಾನಕಿ, ಪತ್ನಿ ಸುಲೋಚನ ಮತ್ತು ಸೋದರ ಕೋದಂಡರಾಮನ್ ಇವರುಗಳು ವಿಶೇಷವಾಗಿ ಪೂಜ್ಯ ಚಾರೀಜಿಯವರನ್ನು ಉದ್ದೇಶಿಸಿ ನೀಡಿದ್ದ *ದಿವ್ಯಲೋಕದ ಸಂದೇಶಗಳು* ಎಂಬ ವಿಶೇಷ ಪ್ರಕಟಣೆಯ ಬಿಡುಗಡೆಗೆ ಆಹ್ವಾನಿಸಲಾಯಿತು. ಸೋದರ ಕೃಷ್ಣರವರು ತಮ್ಮ ಭಾಷಣದಲ್ಲಿ ಈ ನಿರಂತರ ಆಧ್ಯಾತ್ಮಿಕ ಅನ್ವೇಷಣೆಯಲ್ಲಿ ನಮ್ಮೆಲ್ಲರನ್ನು ಮುನ್ನಡೆಸಲು ಸೋದರ ಕಮಲೇಶರನ್ನು ಗುರು ಪರಂಪರೆಗೆ ಆಯ್ಕೆ ಮಾಡಿರುವುದರ ಬಗ್ಗೆ ತಮಗಾಗಿರುವ ಹೆಮ್ಮೆ ಮತ್ತು ಸಂತೋಷವನ್ನು ಅಭಿವ್ಯಕ್ತಿಸಿದರು. ಗುರುಗಳು ನಮ್ಮ ಸೇವೆಗಾಗಿ ಇರುವವರಲ್ಲ, ಆದರೆ ಅವರನ್ನು ಆಯ್ಕೆ ಮಾಡಿರುವುದರಿಂದ ಅವರು ಗುರು ಪರಂಪರೆಗೆ ನೀಡಿರುವ ಆಶ್ವಾಸನೆ ಬಗ್ಗೆ ನಾವು ಸ್ಮರಿಸಬೇಕು ಎಂದರು.

ಚಾರೀಜಿಯವರ ಕುರಿತು ಮಾತನಾಡುತ್ತ ಹೇಗೆ ಅವರ ತಂದೆ ಏನೇ ತೊಂದರೆಗಳು ಎದುರಾದರೂ ಸಂಸ್ಥೆಯ ಸೇವೆಯ ವಿಷಯದಲ್ಲಿ ಅವರೆಂದೂ ಆಯಾಸಗೊಳ್ಳುತ್ತಿರಲಿಲ್ಲ ಎಂದರು. *ದಿವ್ಯಲೋಕದ ಸಂದೇಶಗಳ* ಬಗ್ಗೆ ಮಾತನಾಡುತ್ತ ಚಾರೀಜಿಯವರು ಈ ಸಂದೇಶಗಳನ್ನು ಹೆಚ್ಚು ಛಾಯಾಚಿತ್ರಗಳಿರುವ ಒಂದು ವಿಶೇಷ ಆಕರ್ಷಕ ಪುಸ್ತಕವಾಗಿ ಪ್ರಕಟಿಸಲು ಇಚ್ಛಿಸುತ್ತಿದ್ದರೆಂದು ಹೇಳಿದರು. ಪುಸ್ತಕ ಸಿದ್ಧತೆಯ ಹಂತದಲ್ಲಿ, ಚಾರೀಜಿಯವರು ಅವರಿಗೆ ಬರುತ್ತಿದ್ದ ಹೊಸ ಸಂದೇಶಗಳನ್ನು ಹರ್ಷದಿಂದ ಅಳವಡಿಸುತ್ತಿದ್ದರು ಮತ್ತು ಮೊದಲ ಪ್ರತಿ ಸಿದ್ಧಗೊಂಡಾಗ ಅವರು ಅತ್ಯಂತ ಪುಳಕಿತರಾದರು ಎಂದರು.

ಇದಾದ ಬಳಿಕ ನಮ್ಮ ಸಹಜಮಾರ್ಗ ಕುಟುಂಬದ ಮಕ್ಕಳಿಂದ ವಿವಿಧ ಪ್ರಕಟಣೆಗಳ ಬಿಡುಗಡೆ ಕಾರ್ಯಕ್ರಮವಿತ್ತು.

5.30 ರ ಸಂಜೆ ಸತ್ಸಂಗದ ನಂತರ, ಸೋದರಿ ರಂಜನ ಮೆಹತರವರು ತಲ್ಲೀನಗೊಳಿಸುವ ಕೆಲವು ಭಜನೆಗಳನ್ನು ಹಾಡಿ ವಿಶೇಷ ವಾತಾವರಣದ ಮೆರುಗು ಹೆಚ್ಚಿಸಿದರು. ಬಳಿಕ ಕಮಲೇಶ್ ಭಾಯಿಯವರು ಭಾಷಣ ನೀಡಿದರು. ನಾವುಗಳು ಬೇರೆಯವರನ್ನು ಟೀಕಿಸದಿರುವ ಅಗತ್ಯತೆಯ ಪ್ರಾಮುಖ್ಯತೆ, ಗುರುಗಳೊಡನೆ ನಾವು ಶಾಶ್ವತ ಆಂತರಿಕ ಸಂಪರ್ಕವನ್ನು ಸ್ಥಾಪಿಸಿಕೊಂಡು ನಾವೆಲ್ಲರು ಒಂದೇ ಕುಟುಂಬದವರೆಂದು ಭಾವಿಸುವ ಬಗ್ಗೆ ಮಾತನಾಡಿದರು.

- ಬೇರೆಯವರನ್ನು ಟೀಕಿಸುವ ಅಭ್ಯಾಸಿಗಳ ಹವ್ಯಾಸದಿಂದ ತಾವು ಅಶಾಂತರಾಗಿರುವುದಾಗಿ ಕಮಲೇಶ್ ಭಾಯಿಯವರು ಹೇಳಿದರು.





ಯಾವುದೇ ಕುಟುಂಬದೊಳಗೆ ಎಲ್ಲರೂ ಸೇರಿ ಪರಿಹಾರವನ್ನು ಕಂಡುಕೊಳ್ಳುವ ಹಾಗೆ ನಾವು ಒಂದೇ ಕುಟುಂಬದವರು ಎಂದು ತಿಳಿದು ಪರಸ್ಪರ ಮಾತನಾಡಿ ಭಿನ್ನತೆಯನ್ನು ಪರಿಹರಿಸಿಕೊಳ್ಳಬಹುದೆಂದರು.ನಮ್ಮ ಪ್ರೀತಿಪಾತ್ರ ಚಾರೀಜಿ ಮಹಾರಾಜರ ಮಹಾಸಮಾಧಿಯ ನಂತರ ಆಗಿರುವ ಅನೇಕ ಬದಲಾವಣೆಗಳ ಬಗ್ಗೆ ತಾವು ಕೇಳುತ್ತಿರುವ ಟೀಕೆಗಳ ಬಗ್ಗೆ ಅವರು ಮಾತನಾಡಿದರು ಮತ್ತು ಪ್ರತಿಯೊಂದು ಕ್ರಮವೂ ಗುರುಪರಂಪರೆಯ ಆಶಯಕ್ಕೆ ತಕ್ಕಂತೆ ಇರುವುದಾಗಿ ದಿಟ್ಟತನದಿಂದ ಹೇಳಿದರು.

- ಸಂಕಲ್ಪಶಕ್ತಿಯ ಬಗ್ಗೆ ಮಾತನಾಡುತ್ತ ಅವರು ನಮಗೆ ಅವಶ್ಯವಿರುವುದು ಆಳವಾದ ಅಭಿಲಾಷೆ (ಮನಸ್ಸು); ಅದಕ್ಕೆ ಬೇಕಾದ ಶಕ್ತಿಯನ್ನು 'ಆತ' ನೀಡುವನು. ನಾವು ಉತ್ಕಟ ಅಭಿಲಾಷೆ ಅಥವಾ ಸಾಧಿಸಲೇಬೇಕೆಂಬ ಸಂಕಲ್ಪವನ್ನು ಸ್ಥಿರಗೊಳಿಸಕೊಳ್ಳಬೇಕಾಗಿದೆ ಎಂದು ಹೇಳಿದರು.
- ನಾವು ಗುರುಗಳಂತೆಯೇ ಆಗಿಬಿಡಬೇಕೆಂಬ ಉತ್ಕಟ ಅಭಿಲಾಷೆಯನ್ನು ಹೊಂದಿರಬೇಕು. ಆದರೆ 'ನನ್ನನ್ನು ನಿನ್ನಂತೆಯೇ ಮಾಡಿಬಿಡು' ಎಂದು ಸುಮ್ಮನೆ ಅಂದುಕೊಳ್ಳುತ್ತಿದ್ದರೆ ಅದು ಅವಿವೇಕವೆನಿಸುವುದು. ನಮ್ಮ ಪ್ರತಿ ಹೆಜ್ಜೆಯಲ್ಲಿಯೂ ನಾವು ಏನನ್ನು ಬದಲಾಯಿಸಿಕೊಳ್ಳುವ ಅವಶ್ಯಕತೆಯಿದೆ, ಯಾವ ದೌರ್ಬಲ್ಯವನ್ನು ತೆಗೆದುಬಿಡಬೇಕು ಎಂಬುದರ ಬಗ್ಗೆ ಯೋಚಿಸುತ್ತಿರಬೇಕು ಹಾಗು ಗುರುಗಳೊಡನೆ ಅಚಲವಾದ ಸಂಪರ್ಕವನ್ನು ನೆಲೆಗೊಳಿಸಬೇಕು.
- ಗುರುಗಳ ದರ್ಶನ ಮಾಡಲು ಇರುವ ಭ್ರಾಂತಿಯ ಬಗ್ಗೆ ಮಾತನಾಡುತ್ತ ಅವರು ಬಾಬೂಜಿಯವರು ಹೇಳುತ್ತಿದ್ದ 'ಬಹಳಷ್ಟು ಮಂದಿ ನನ್ನನ್ನು ನೋಡಲು ಬರುತ್ತಿದ್ದರು ಆದರೆ ಯಾರೊಬ್ಬರೂ ನನ್ನನ್ನು ನೋಡುತ್ತಿರಲಿಲ್ಲ' ಎಂಬ ಮಾತುಗಳನ್ನು ಉಲ್ಲೇಖಿಸಿದರು. ಇದೊಂದು ನೋಡುವ ವಸ್ತುವಲ್ಲ ಅದು ಅಂತರ್ಯದಲ್ಲಿ ಅನುಭವಿಸುವಂತಹದು ಎಂದು ತಿಳಿಸಿದರು.

## ಮೇ 1, 2015

'ಅನಾಮಿಕನ ಪವಿತ್ರ ಪ್ರೇಮ' ಎಂಬುದು ಭಂಡಾರದ ಕೊನೆಯ ದಿನದ ವಿಷಯವಾಗಿತ್ತು.



ಕೊನೆಯ ಸತ್ಸಂಗದ ಅನಂತರ ಕಮಲೇಶ ಭಾಯಿಯವರು ಭಂಡಾರಗಳಲ್ಲಿ ನಾವು ಗಳಿಸುವ ಸ್ವೋಪಜ್ಞ ಸ್ಥಿತಿಯನ್ನು ಸ್ವವ್ಯಕ್ತಿತ್ವವಾಗಿ ನಮ್ಮನ್ನು ಗುರುತಿಸಿಕೊಳ್ಳುವುದರ ಬಗ್ಗೆ ಹೇಳಿದರು. ನಾವು ಭಂಡಾರಗಳಲ್ಲಿ ಭಾಗವಹಿಸುವ ಪ್ರಾಮುಖ್ಯತೆಯ ಬಗ್ಗೆ, ನಮ್ಮ ಅಪೇಕ್ಷೆಗಳನ್ನು ಉಪೇಕ್ಷಿಸುವ ಅವಶ್ಯಕತೆಯ ಬಗ್ಗೆ ಹಾಗು ಧ್ಯಾನಕ್ಕಾಗಿ ಸಮಯವನ್ನು ನಿಗದಿ ಪಡಿಸಿಕೊಳ್ಳುವ ಬಗ್ಗೆ ಮಾತನಾಡಿ ಮುಂದಿನ ತಿರುವಳ್ಳೂರಿನ ಭಂಡಾರಕ್ಕೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯಾಸಿಗಳು ಭಾಗವಹಿಸುವುದನ್ನು ನೋಡುವ ತಮ್ಮ ಆಶಯವನ್ನು ವ್ಯಕ್ತಪಡಿಸಿದರು.

ಎಲ್ಲ ಸ್ವಯಂಸೇವಕರು, ಭಂಡಾರದ ಉತ್ಸವ ಸಮಿತಿ, ಲಖನೌ ಅಭ್ಯಾಸಿಗಳು, ಆಶ್ರಮದ ವ್ಯವಸ್ಥಾಪಕರು ಹಾಗು ಒಟ್ಟಾಗಿ ಬಂದು ಜೊತೆಗೂಡಿ ಕೆಲಸ ಮಾಡಿದ ಎಲ್ಲರಿಗು ಅವರು ಧನ್ಯವಾದಗಳನ್ನು ಅರ್ಪಿಸಿದರು. ತಿರುವಳ್ಳೂರಿನಲ್ಲಿ ಜರುಗಲಿರುವ ಪೂಜ್ಯ ಚಾರೀಜಿಯವರ 88ನೇ ಜನ್ಮ ದಿನೋತ್ಸವದ ಉತ್ಸವಕ್ಕೆ ಅಭ್ಯಾಸಿಗಳ ಸಂಪೂರ್ಣ ಹಾಜರಾತಿಯನ್ನು ಬಯಸುವುದಾಗಿ ಪ್ರೀತಿಯಿಂದ ತಮ್ಮ ಹಂಬಲವನ್ನು ವ್ಯಕ್ತಪಡಿಸಿದರು.

ಕೊನೆಯ ಸತ್ಸಂಗದ ನಂತರ ಗೌರವಾನ್ವಿತ ಕಮಲೇಶ ಭಾಯಿಯವರು ಉತ್ಸವ ಸಮಿತಿಯ ಸದಸ್ಯರನ್ನು ಕುಟೀರದಲ್ಲಿ ಭೇಟಿ ಮಾಡಿ ಅವರ ಕೊಡುಗೆಯ ಬಗ್ಗೆ ಅಭಿನಂದಿಸಿ ಅವರೊಟ್ಟಿಗೆ ಉಪಹಾರವನ್ನು ಸ್ವೀಕರಿಸಿದರು. ನಂತರ ಸಹಜ ಮಾರ್ಗ ಆಧ್ಯಾತ್ಮಿಕ ಅಧಿಷ್ಠಾನದ ಧರ್ಮದರ್ಶಿಗಳೊಡನೆ 10 ಗಂಟೆಗೆ ಒಂದು ಸಭೆ ನಡೆಯಿತು. ಸುಮಾರು 11 ಗಂಟೆಯ ವೇಳೆಗೆ ಅವರು ಕಾರ್ಯಕಾರಿ ಸಮಿತಿಯೊಡನೆ ಸಭೆ ನಡೆಸಿ ಅವರೊಡನೆ ಭೋಜನ ಸ್ವೀಕರಿಸಿದರು.

ಎಲ್ಲ ಅಭ್ಯಾಸಿಗಳು ಉತ್ಸವದಲ್ಲಿ ತಮ್ಮ ಹಾಜರಾತಿಯ ಗುರುತಿಗಾಗಿ ಸುವರ್ಣ ಗ್ರಂಥದಲ್ಲಿ ಸಹಿಯನ್ನು ಮಾಡುವಂತೆ ವಿನಂತಿಸಲಾಯಿತು. ಯುವ ಅಭ್ಯಾಸಿಗಳ ಸುಮಾರು 10 ಮೊಬೈಲ್ ಡೆಸ್ಕ್ ತಂಡಗಳು ಈ ಸಲುವಾಗಿ ಅಭ್ಯಾಸಿಗಳ







ಬಿಡಾರಗಳ ಸುತ್ತ ಓಡಾಡಿದರು. ಕಮಲೇಶ ಭಾಯಿಯವರ ಪ್ರಾರ್ಥನೆ ಮತ್ತು ಚಿಂತನೆಗಳ ಬಗ್ಗೆ ಇತ್ತೀಚಿನ ಸಲಹೆಗಳನ್ನು ಒಂದು ವಿಳಾಸದ ಚೀಟಿಯ ಅಳತೆಯ ಕಾರ್ಡಿನಲ್ಲಿ ಹಾಗು ಬಾಬೂಜಿಯವರು ಬರೆದ ‘ವ್ಯಕ್ತಿತ್ವದಲ್ಲಿನ ಸಮಸ್ಯೆಗಳು’ ಎಂಬ ಲೇಖನವನ್ನು ಒಂದು ಕಿರು ಹೊತ್ತಿಗೆಯ ಮೂಲಕ ಅಭ್ಯಾಸಿಗಳಿಗೆ ಹಂಚಲಾಯಿತು.

## ಮಕ್ಕಳ ಮತ್ತು ಯುವ ಕೇಂದ್ರದ ಕಾರ್ಯಕ್ರಮಗಳು

ತುಡಿಯುವ ಮನದ ಎಲ್ಲ ವಯೋಮಾನದವರಿಗೆ ಒಂದು ಮಕ್ಕಳ ಕೇಂದ್ರವನ್ನು ರಚಿಸಲಾಗಿತ್ತು.

ಸತ್ಸಂಗಗಳಲ್ಲಿ ಯಾವ ಅಡೆತಡೆಗಳಿಲ್ಲದೆ ಭಾಗವಹಿಸಲು ಪೋಷಕರಿಗೆ ಅನುವು ಮಾಡಿಕೊಡಲು ಬೆಳಗಿನ 6.00 ಗಂಟೆಯಿಂದ ಸಂಜೆ 7.00 ಗಂಟೆಯವರೆಗೆ ಇದು ಕಾರ್ಯಪ್ರವೃತ್ತವಾಗಿದ್ದಿತು. ನೋಂದಣಿಸಿದ ಸುಮಾರು 2800 ಮಕ್ಕಳನ್ನು 3 ತಂಡಗಳಾಗಿ ವಿಭಾಗ ಮಾಡಲಾಯಿತು. ಕಾರ್ಯಕ್ರಮಗಳು ಸರಳತೆಯನ್ನಾಧರಿಸಿದ ವಿಷಯಗಳನ್ನೊಳಗೊಂಡಿದ್ದವು. ಪ್ರಪಂಚಾಂತ್ಯದಿಂದ ಆಗಮಿಸಿದ್ದ ಮಕ್ಕಳು ಹೃದಯದ ಆಕಾರದಲ್ಲಿ ರೂಪಿಸಿ ಸಿಂಗರಿಸಿದ್ದ ಆಕೃತಿಗಳಿಂದ ಇಡೀ ಪ್ರದೇಶವನ್ನು ಅಲಂಕರಿಸಲಾಗಿತ್ತು. ಅವರನ್ನು ರಂಜಿಸಲು ಹಾಗು ಅವರಲ್ಲಿ ಮೌಲ್ಯಗಳನ್ನು ತುಂಬಿಸುವ ಸಲುವಾಗಿ ಹಲವಾರು ಕಾರ್ಯಕ್ರಮಗಳನ್ನು ನಡೆಸಲಾಯಿತು. ಪ್ರಮುಖವಾದ ವಿಚಾರವೆಂದರೆ ಮಿಷನ್ನಿನ ಹಲವಾರು ಪುಸ್ತಕಗಳನ್ನು ಭಂಡಾರದಲ್ಲಿ ಬಿಡುಗಡೆ ಮಾಡುವವರನ್ನು ಆಯ್ಕೆಮಾಡಲು ಚೀಟಿಯ ಮೂಲಕ ಆಯ್ಕೆ ಮಾಡುವ (ಲಕ್ಕಿ ಡ್ರಾ) ಆಟಗಳಲ್ಲಿ ಪಾಲ್ಗೊಳ್ಳಲು ಮಕ್ಕಳಿಗೆ ಅವಕಾಶವಿದ್ದಿತು. ಆಯ್ಕೆಗೊಂಡ ಮಕ್ಕಳು ಕಮಲೇಶ ಭಾಯಿಯವರ ಸಮ್ಮುಖದಲ್ಲಿ ಹಲವಾರು ಪ್ರಕಟನೆಗಳನ್ನು ಬಿಡುಗಡೆ ಮಾಡುವ ಅವಕಾಶ ದೊರಕಿದುದರಿಂದ ಬಹಳ ಹರ್ಷಿತಗೊಂಡರು.

ಪ್ರತಿದಿನದ ಸಮಾವೇಶವನ್ನು ಮಾಳಿಗೆ ಮೇಲಿನ ತೋಟಗಾರಿಕೆಯ (ಟೆರೇಸ್ ಗಾರ್ಡನಿಂಗ್) ಬಗ್ಗೆ ಮಕ್ಕಳು ಮಣ್ಣಿನ ತಯಾರಿ ಮತ್ತು ಸಸಿಗಳನ್ನು ನೆಡುವುದರೊಂದಿಗೆ ಪ್ರಾರಂಭ ಮಾಡಲಾಯಿತು. ನಂತರ ಸ್ಪೀಕಿಂಗ್ ಟ್ರೀ ಕಾರ್ಯಕ್ರಮದಲ್ಲಿ ಮಕ್ಕಳು ತರುಗಳೊಂದಿಗೆ ಸಂಭಾಷಣೆ ನಡೆಸುತ್ತ ಯಥಾರ್ಥವಾಗಿ ಕಾಲ ಕಳೆದರು. ಆಯಾಸ ಪರಿಹಾರದ (ರಿಲಾಕ್ಸೇಷನ್ ಟೆಕ್ನಿಕ್) ತಂತ್ರವನ್ನು ಪ್ರತಿ ಸಮಾವೇಶದ ಪ್ರಾರಂಭದಲ್ಲಿ ಎಲ್ಲಾ ಮಕ್ಕಳು ಮಾಡಿದರು. ನಿಯಮ 9 ನ್ನು ಬಾಯಿ ಪಾಠ ಮಾಡುವ ಸಂದರ್ಭ ಸಹ ಇದ್ದಿತು. ಮಕ್ಕಳಿಗೆ ಬಾಬೂಜಿಯವರ ಜೀವನವನ್ನು ಪರಿಚಯಿಸುವ ಸಲುವಾಗಿ ಏಪ್ರಿಲ್ 30ರಂದು, ಅವರ ಬಾಲ್ಯದ ಮುಖ್ಯ ಸಂಗತಿಗಳನ್ನು ಎತ್ತಿ ತೋರಿಸುವ ಒಂದು ಸಣ್ಣ ನಿರೂಪಣೆ ಹಾಗು ನಂತರ ಬಾಬೂಜಿಯವರ ಬಗೆಗಿನ ವೀಡಿಯೊ ಬಿತ್ತರಿಕೆಗಳು ಇದ್ದುವು. ಲಕ್ನೋ ಪಟ್ಟಣದ ಬಗ್ಗೆ ಸಹ ಒಂದು ಸಂಕ್ಷಿಪ್ತ ನಿರೂಪಣೆ ತೋರಿಸಲಾಯಿತು. ಉತ್ತರ ಪ್ರದೇಶದ ಪ್ರವಾಸೋದ್ಯಮ ಇಲಾಖೆಯು ಮಕ್ಕಳ ಮನೋರಂಜನೆಗಾಗಿ 29 ಮತ್ತು 30ರ ಮಧ್ಯಾಹ್ನದ ವೇಳೆಯಲ್ಲಿ ತೊಗಲು ಬೊಂಬೆ ಮತ್ತು ಯಕ್ಷಿಣಿಗಾರರ ಸೇವೆಯನ್ನು ಒದಗಿಸಿತ್ತು. ಹಾಡು ಮತ್ತು ನೃತ್ಯಗಳನ್ನೊಳಗೊಂಡ ಒಂದು ಸಾಂಸ್ಕೃತಿಕ





ಕಾರ್ಯಕ್ರಮವನ್ನು ಕಾನ್ಪುರ, ವಿಜಯವಾಡ, ಲಕ್ನೋ ಮತ್ತು ಚೆನ್ನೈ ಕೇಂದ್ರಗಳ ಮಕ್ಕಳು ನಡೆಸಿಕೊಟ್ಟರು.

13 – 17 ರ ವಯೋಮಾನದ ಅಭ್ಯರ್ಥಿಗಳು ನಾಸಾದ ಅಪಾಯದಿಂದ ಪಾರಾಗುವ ಕಾರ್ಯಕ್ರಮವನ್ನು ನೋಡಿ ಆನಂದಿಸಿದರು. ಅವರು 'ಸಂಪರ್ಕದಲ್ಲಿರುವಿಕೆ', 'ಗುರುಗಳ ಬಗ್ಗೆ ಶ್ರದ್ಧೆ', 'ಅವರ ಧ್ಯೇಯಗಳ ಪ್ರಸರಣ' ಎಂಬ ವಿಷಯಗಳಿದ್ದ ಸಮಾವೇಶದಲ್ಲಿ ಸಹ ಪಾಲ್ಗೊಂಡರು. ಭಾಷಣಕಾರರು ಗುರುಗಳ ಮತ್ತು ತಮ್ಮ ವೈಯಕ್ತಿಕ ಅನುಭವಗಳನ್ನು ಹಂಚಿಕೊಂಡರು.ಮಕ್ಕಳ ಮತ್ತು ಯುವ ಕೇಂದ್ರದ ಕಾರ್ಯಕ್ರಮಗಳು ಗುರುಗಳು ಪ್ರಾಯೋಜಿಸಿದ್ದ ಐಸ್‌ಕ್ರೀಮ್ ಅನ್ನು ಮಕ್ಕಳು ಮೆಲ್ಲುವುದರೊಂದಿಗೆ ಕೊನೆಗೊಂಡವು.



## ಹೊಸ ಪ್ರಕಟನೆಗಳು

### ಪುಸ್ತಕಗಳು










ರಾಮಚಂದ್ರರ ಸಮಗ್ರ ಕೃತಿಗಳು
ಸಂಪುಟ 1 (ತಮಿಳು)

ರಾಮಚಂದ್ರರ ಸಮಗ್ರ ಕೃತಿಗಳು
ಸಂಪುಟ 4 (ಹಿಂದಿ)

ದಿ ಸ್ಟೋರಿ ಆಫ್ ಡಿವೈನ್ ರೆವೊಲ್ಯುಶನ್
(ಆಂಗ್ಲ)




ರಾಮಚಂದ್ರರ ಸಮಗ್ರ ಕೃತಿಗಳು
ಸಂಪುಟ 5
(ಆಂಗ್ಲ, ಗುಜರಾತಿ, ಹಿಂದಿ, ಕನ್ನಡ, ಮರಾಠಿ, ತಮಿಳು, ತೆಲುಗು)

### ಎಂಪಿ3 ಶ್ರವ್ಯ ಪುಸ್ತಕಗಳು




ದಿವ್ಯಲೋಕ್ ಸೆ ಸಂದೇಶ್
ಹಿಂದಿ




ವಾಯ್ಸ್ ರಿಯಲ್
ಆಂಗ್ಲ




ಸಹಜಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ ಹಾಗು ಸಹಜಮಾರ್ಗಾನುಸಾರ ರಾಜಯೋಗದ ಪ್ರಭಾವ
ತೆಲುಗು




ಸಹಜಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ ಹಾಗು ಸಹಜಮಾರ್ಗಾನುಸಾರ ರಾಜಯೋಗದ ಪ್ರಭಾವ
ಉರ್ದು

## ಹೊಸ ಪ್ರಕಟನೆಗಳು

ಮುಂದುವರೆದುದು....




## ಎಂಪಿ3 ಆಡಿಯೊ

ರಂಗೋಂಕೆ ರಂಗ್, ಮಾಲಿಕ್ ಕೆ ಸಂಗ್

ಹಿಂದಿ










## ಆಂಗ್ಲ ಡಿವಿಡಿಗಳು

50 ಇಯರ್ಸ್ ಆಫ್ ಸ್ಪ್ಲೆಂಡರ್

ಕ್ಲೀನ್ಲಿನೆಸ್ ಆ್ಯಂಡ್ ಪ್ಯೂರಿಟಿ

ದ ಯುನಿವರ್ಸ್ ಈಸ್ ಲವ್

ಎಕ್ಸ್‌ಪೀರಿಯನ್ಸ್ ಆ್ಯಂಡ್ ಕಂಡಿಷನ್

ಇವಾಲ್ವ್ ವಿಥ್ ಟೈಮ್

ರೀಡ್ ಆ್ಯಂಡ್ ಎಂಜಾಯ್

ಎ ಸೀಡ್ ಫಾರ್ ಫ್ಯೂಚರ್






















## ಹಿಂದಿ ಡಿವಿಡಿಗಳು

ಸಾಧನಾ ಮೆ ಡೂಬಿಯೆ

ಸಹಜ್‌ಮಾರ್ಗ್ ಕೊ ದಿಲ್ ಸೆ ಅಪ್ನಾಯಿಯೆ

ಹತ್ತು ನಿಯಮಗಳು – ರಿಷಿ ರಂಜನ್

To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2015 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.